ಆ. ಹಾಗಿದ್ದರೆ, ಯಾವ ಯಾವ ಇಲಾಖೆಗಳಲ್ಲಿ ತುಂಬಲಾಗಿದೆ. ವಿವರ ನೀಡುವುದು (ಜಿಲ್ಲಾವಾರು)

ಇ. ಇನ್ನೂ ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬದೇ ಇರುವ ಇಲಾಖೆಗಳು ಯಾವುವು. ವಿವರ ನೀಡುವುದು

ಈ. ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬದೇ ಇರುವ ಇಲಾಖೆಗಳ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗುವುದು.

ಉ. ಬ್ಯಾಕ್‌ಲಾಗ್ ಹುದ್ದೆಗಳನ್ನು ತುಂಬಲು ಎಲ್ಲಿಯವರೆಗೆ ಗಡುವು ನೀಡಲಾಗಿದೆ. ಈ ಗಡುವನ್ನು ವಿಸ್ತರಿಸಲಾಗುವುದೆ;

ಊ. ಬ್ಯಾಕ್‌ಲಾಗ್ ಹುದ್ದೆ ತುಂಬಲು ಯಾವ ಮಾನದಂಡವನ್ನು ಅನುಸರಿಸಲಾಗುವುದು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಅ. ಇಲ್ಲಿಯವರೆಗೆ ಸರಿಸುಮಾರು 17,100 ಹಿಂಬಾಕಿ ಹುದ್ದೆಗಳನ್ನು ಗುರುತಿಸಲಾಗಿದೆ. ಇದಕ್ಕೆ ಸಂಬಂಧಿಸಿದಂತೆ ಸುಮಾರು 13,300 ಹುದ್ದೆಗಳನ್ನು ಪ್ರಕಟಿಸಿದ್ದು, ಆಯ್ಕೆಯ ಪ್ರಕ್ರಿಯೆಯೂ ವಿವಿಧ ಹಂತದಲ್ಲಿದೆ. ಈಗಾಗಲೇ ಪ್ರಕಟಿಸಲಾದ 13,300 ಹುದ್ದೆಗಳ ಪೈಕಿ ಸುಮಾರು 5,300 ಅಭ್ಯರ್ಥಿಗಳು ಆಯ್ಕೆಯಾಗಿದ್ದು, ನೇಮಕಾತಿ ಆದೇಶಗಳು ಜಾರಿಮಾಡುವ ಹಂತದಲ್ಲಿವೆ. ಜಿಲ್ಲಾವಾರು ಮಾಡದೆ, ಇಲಾಖಾವಾರು ನಿಗಮಗಳವಾರು ಸಾರ್ವಜನಿಕ ಉದ್ದಿಮೆಗಳು ಇತ್ಯಾದಿಗಳಲ್ಲಿ ಹುದ್ದೆಗಳನ್ನು ಗುರುತಿಸುವ ಮತ್ತು ಆಯ್ಕೆ ಮಾಡಲಾಗುತ್ತಿದೆ.

ಈ. ನೇಮಕಾತಿ ಪ್ರಾಧಿಕಾರಿಗಳು ಉದ್ದೇಶಪೂರ್ವಕವಾಗಿ ನಿರ್ಲಕ್ಷತೆ ಮತ್ತು ವಿಳಂಬ ಮಾಡಲು ಪ್ರಯತ್ನ ಪಟ್ಟಂತೆ ಪ್ರಕರಣಗಳನ್ನು ವರದಿ ಮಾಡಿದ ಅಥವಾ ಪತ್ತೆ ಮಾಡಿದ ಪ್ರಕರಣಗಳ ಮೇಲೆ ಕರ್ನಾಟಕ ಅನುಸೂಚಿತ ಜಾತಿಗಳು ಅನುಸೂಚಿತ ಬುಡಕಟ್ಟುಗಳು ಮತ್ತು ಇತರೇ ಹಿಂದುಳಿದ ವರ್ಗಗಳ (ನೇಮಕಾತಿ ಮುಂತಾದವುಗಳ ಮೀಸಲಾತಿ ತಿದ್ದುಪಡಿ) ನಿಯಮಗಳು 2000 ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ದೌರ್ಜನ್ಯ ಕಾಯ್ದೆ ಅಡಿಯಲ್ಲಿ ಕ್ರಮ ಜರುಗಿಸಲಾಗುವುದು.

ಉ. ಹಿಂಬಾಕಿ ಹುದ್ದೆಗಳನ್ನು ದಿ: 31.12.2002ರ ಒಳಗೆ ತುಂಬಲು ಪ್ರಮಾಣಿಕ ಪ್ರಯತ್ನ ಮಾಡಲಾಗುತ್ತಿದೆ.

ಊ. ಸರ್ಕಾರಿ ಅಧಿಸೂಚನೆ ದಿ: 21.11.2001ರ ರೀತ್ಯಾ ಹಿಂಬಾಕಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ರಾಜ್ಯದಲ್ಲಿ ಕೈಗಾರಿಕಾ ಬಂಡವಾಳ ಜಾಗತಿಕ ಹೂಡಿಕೆದಾರರ ಸಭೆ

1803(2324): ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿ ಕೈಗಾರಿಕಾ ಬಂಡವಾಳ ಹೂಡಿಕೆಗಾಗಿ ಜಾಗತಿಕ ಹೂಡಿಕೆದಾರರ ಸಭೆ ಎಂದು ನಡೆಯಿತು.

ಆ. ಇದರಿಂದ ಎಷ್ಟು ಯೋಜನೆಗಳಿಗೆ ಎಷ್ಟು ಬಂಡವಾಳ ಹರಿದು ಬಂದಿದೆ.

ಇ. ಅನೇಕ ಉದ್ಯಮಿಗಳು ಭೂಮಿ ಹೊಂದುವ ಏಕೈಕ ಉದ್ದೇಶದಿಂದ ಕೈಗಾರಿಕೆಗಳನ್ನು ಪ್ರಾರಂಭಿಸಲು ಅನುಮತಿ ಕೋರಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಕೆಲವರು ತಮಗೆ ಮಂಜೂರಾಗಿದ್ದ ಭೂಮಿಯನ್ನು ಮಾಡಿಕೊಂಡು ದುರುಪಯೋಗಪಡಿಸಿಕೊಂಡಿರುವುದು ನಿಜವೇ;

ಈ. ಜಮೀನು ನೀಡುವಲ್ಲಿ ಪ್ರಭಾವಶಾಲಿ ಉದ್ಯಮಗಳಿಗೆ ಕಡಿಮೆ ಬೆಲೆಯಲ್ಲಿ ಜಮೀನು ನೀಡಿರುವುದು ನಿಜವೇ?

ಶ್ರೀ ಆರ್. ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು)

ಅ. ರಾಜ್ಯದಲ್ಲಿ ಕೈಗಾರಿಕಾ ಬಂಡವಾಳ ಹೂಡಿಕೆಯನ್ನು ಪ್ರೋತ್ಸಾಹಿಸಲು ಜಾಗತಿಕ ಹೂಡಿಕೆದಾರರ ಸಮಾವೇಶವನ್ನು ಜೂನ್ 2000 ಮಾಹೆಯಲ್ಲಿ ಆಯೋಜಿಸಲಾಯಿತು.

ಆ. ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶ ಜೂನ್ 2000ರಲ್ಲಿ ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿಯಿಂದ 178 ಕೈಗಾರಿಕಾ ಯೋಜನೆಗಳನ್ನು (ಪ್ರತಿಯೊಂದು ಘಟಕದಲ್ಲೂ ರೂ. 50.00 ಕೋಟಿ ಅಥವ ಕಡಿಮೆ ಬಂಡವಾಳದ ಯೋಜನೆಗಳು) ಅನುಮೋದಿಸಲಾಗಿರುವುದು. ಈ 178 ಯೋಜನೆಗಳಲ್ಲಿ ಒಟ್ಟು ಬಂಡವಾಳ ಹೂಡಿಕೆ ರೂ. 2243.52 ಕೋಟಿಯಾಗಿರುತ್ತದೆ. ಇದುವರೆವಿಗೂ ಈ ಯೋಜನೆಗಳಲ್ಲಿ 45 ಕೈಗಾರಿಕಾ ಯೋಜನೆಗಳು ಕಾರ್ಯಾರಂಗೊಂಡಿದ್ದು ರೂ. 443.63 ಕೋಟಿಗಳ ಬಂಡವಾಳ ಹೂಡಿಕೆಯಾಗಿದ್ದು ಉನ್ನತ ಮಟ್ಟದ ಸಮಿತಿಯಿಂದ 47 ಕೈಗಾರಿಕಾ ಯೋಜನೆಗಳನ್ನು (ರೂ. 50.00 ಕೋಟಿಗಳಿಗಿಂತ ಹೆಚ್ಚು ಬಂಡವಾಳ) ರೂ. 23082. 72 ಕೋಟಿಗಳಿಗೆ ಅನುಮೋದಿಸಲಾಗಿರುವುದು. ಇದುವರೆವಿಗೂ ಈ ಯೋಜನೆಗಳಲ್ಲಿ 3 ಕೈಗಾರಿಕಾ ಯೋಜನೆಗಳು ಕಾರ್ಯಾರಂಭಗೊಂಡಿದ್ದು, ರೂ. 411.10 ಕೋಟಿಗಳ ಬಂಡವಾಳ ಹೂಡಿಕೆಯಾಗಿದೆ.

ಇ. ಇಂತಹ ಪ್ರಕರಣ ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ.

ಈ. ಒಂದೇ ಘಟಕ ಸಂಕೀರ್ಣಕ್ಕೆ ಹಂಚಿಕೆ ಬೆಲೆಯನ್ನು ಭೂ ಸ್ವಾಧೀನ ವೆಚ್ಚದ ಜೊತೆಗೆ ಕೆಐಎಡಿಬಿ ಸೇವಾ ಶುಲ್ಕವನ್ನು ಸೇರಿಸಿ ನಿಗಧಿಪಡಿಸಲಾಗುವುದು. ಜಮೀನು ಅಭಿವೃದ್ಧಿ ಇದ್ದ ಪಕ್ಷದಲ್ಲಿ ಹಂಚಿಕೆ ಬೆಲೆಯನ್ನು ಭೂಸ್ವಾಧೀನ ವೆಚ್ಚದ ಜೊತೆಗೆ ಅಭಿವೃದ್ಧಿ ವೆಚ್ಚ-ಸೇವಾ ಶುಲ್ಕ ಸೇರಿಸಿ ನಿಗಧಿಪಡಿಸಲಾಗುವುದು.

ರಾಜ್ಯದಲ್ಲಿ ಸಣ್ಣ ಕೈಗಾರಿಕೆಗಳು ಮುಚ್ಚುತ್ತಿರುವುದರಿಂದ ಉಂಟಾಗಿರುವ ಪರಿಸ್ಥಿತಿ

1804(2126): ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ) : ಮಾನ್ಯ ಸಣ್ಣ ಕೈಗಾರಿಕೆ ಮತ್ತು ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ. ರಾಜ್ಯದಲ್ಲಿರುವ ಒಟ್ಟು ಸಣ್ಣ ಕೈಗಾರಿಕೆಗಳೆಷ್ಟು;

ಆ. ಇವುಗಳ ಪೈಕಿ ಎಷ್ಟು ಸಣ್ಣ ಕೈಗಾರಿಕೆಗಳು ಮುಚ್ಚಿವೆ ಹಾಗೂ ಎಷ್ಟು ನಷ್ಟದಲ್ಲಿ ಕೆಲಸ ನಿರ್ವಹಿಸುತ್ತಿವೆ;

ಇ. ಸಣ್ಣ ಕೈಗಾರಿಕೆಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಈ. ಸಣ್ಣ ಕೈಗಾರಿಕೆಗಳಿಗೆ ಕೆಲವು ಮೂಲಭೂತ ಸೌಲಭ್ಯಗಳನ್ನು ಒದಗಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;